

بِسْمِ اللّٰهِ الرَّحْمَنِ الرَّحِيمِ

# ವಿರೋಧಿಗಳ ಕುತಂತ್ರಗಳು ಅಹ್ಮದಿಯತ್‌ನ ಅಭಿವೃದ್ಧಿಯನ್ನು ತಡೆಯಲಾರದು

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ 09–12–2016 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಯಾರ ಕಣ್ಣುಗಳಿಗೆ ಪರದೆ ಬಿದ್ದಿದೆಯೋ, ನಾವು ನಂಬುವುದಿಲ್ಲವೆಂದು ಯಾರು ತೀರ್ಮಾನಿಸಿರುವರೋ ಅಂತಹ ಜನರಿಗೆ, ಅಲ್ಲಾಹನಿಂದ ಲಭಿಸುವ ಸಹಾಯ ಮತ್ತು ಅನುಗ್ರಹಗಳ ಸುರಿಮಳೆ ಕಾಣಿಸಲಾರವು. ಅಲ್ಲಾಹನು ತೋರಿಸುತ್ತಿರುವ ದೃಷ್ಟಾಂತಗಳು ಸಹ ಕಾಣಿಸಲಾರವು. ಪ್ರವಾದಿಗಳನ್ನು ನಂಬದವರ ಸ್ಥಿತಿ ಯಾವಾಗಲೂ ಹೀಗೆಯೇ ಇರುತ್ತದೆ. ಅವರು ದೈವಿಕ ದೃಷ್ಟಾಂತಗಳನ್ನು ಕಂಡನಂತರ ಸಹ ಹೇಳುತ್ತಾರೆ, ನಮಗೆ ದೃಷ್ಟಾಂತ ತೋರಿಸಿರಿ ಎಂದು. ಅವರು ಮಿತಿಮೀರಿ ವರ್ತಿಸುತ್ತಿರುವ ಕಾರಣದಿಂದ ಅಲ್ಲಾಹನು ಅವರ ಹೃದಯಗಳನ್ನು ಮುಚ್ಚಿ ಬಿಡುತ್ತಾನೆ. ಅನಂತರ ಅವರು ಸತ್ಯವನ್ನು ಗಳಿಸದವರೇ ಆಗುತ್ತಾರೆ. ಕೆಲವು ಸಾರಿ ಅಲ್ಲಾಹನು ಪ್ರವಾದಿಗೆ ಸಹಾಯಕವಾಗಿ ವಿರೋಧಿಗಳನ್ನು ನೀತಿಪಾಠ ನೀಡುವ ಉದಾಹರಣೆಗಳನ್ನಾಗಿ ಮಾಡುತ್ತಾನೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ವಿರೋಧಿಗಳ ಸ್ಥಿತಿ ಸಹ ಹೀಗೆಯೇ ಇತ್ತು. ಅವರು ದೃಷ್ಟಾಂತಗಳನ್ನು ದರ್ಶಿಸಿದರೂ ಅವರ ಹಟಮಾರಿತನದ ಕಾರಣದಿಂದ ಅವರಿಗೆ ಯಾವ ದೃಷ್ಟಾಂತವನ್ನೂ ಕಾಣಲು ಸಾಧ್ಯವಾಗಲಿಲ್ಲ. ಉದಾಹರಣೆಗೆ ಸೂರ್ಯ ಚಂದ್ರ ಗ್ರಹಣದ ದೃಷ್ಟಾಂತವನ್ನು ನೋಡಿರಿ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಈ ದೃಷ್ಟಾಂತ ಪ್ರಕಟವಾಗುವ ಮೊದಲು ಮೌಲವಿಗಳು ಈ ದೃಷ್ಟಾಂತವನ್ನು ವಿವರಿಸುವ ಹದೀಸನ್ನು ಓದುವಾಗ ಅಳುತ್ತಿದ್ದರು. ಆದರೆ ಈ ದೃಷ್ಟಾಂತ ಪ್ರಕಟವಾದಾಗ, ಒಮ್ಮೆ ಅಲ್ಲ ಎರಡು ಸಾರಿ ಪ್ರಕಟವಾದಾಗ– ಮೊದಲನೆಯ ಸಾರಿ ಹಿಂದೂಸ್ಥಾನದಲ್ಲಿ ಮತ್ತು ಎರಡನೆಯ ಸಾರಿ ಅಮೇರಿಕದಲ್ಲಿ ಪ್ರಕಟವಾದಾಗ– ಈ ದೃಷ್ಟಾಂತ ಪ್ರಕಟವಾಗಲಿ ಎಂದು ಬೇಡಿಕೊಳ್ಳುತ್ತಿದ್ದವರು ತಾವು ಹಿಂದೆ ಹೇಳುತ್ತಿದ್ದ ಮಾತುಗಳನ್ನು ಬದಲಾಯಿಸಿದರು. ಚಂದ್ರ ಗ್ರಹಣ ಪ್ರಕಟವಾದ ಕಾಲದಲ್ಲಿ ಮೌಲವಿ ಗುಲಾಮ್ ಮುರ್ತಝಾ ಎಂಬ ಹೆಸರಿನ ಓರ್ವ ಮೌಲವಿ ತನ್ನ ತೊಡೆಗೆ ಕೈಯಿಂದ ಹೊಡೆಯುತ್ತಾ ಬಹಳ ದುಃಖ ಪ್ರಕಟಿಸುತ್ತಾ 'ಈಗ ಲೋಕ ದಾರಿತಪ್ಪುವುದು' ಎಂದು ಹೇಳಿದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ನೀವು ಯೋಚಿಸಿರಿ. ಈ ಮೌಲವಿ ಅಲ್ಲಾಹನಿಗಿಂತ ಮಿಗಿಲಾಗಿ ಜನರ ಹಿತಕಾಂಕ್ಷಿ ಆಗಿದ್ದರೇ?

ಇದೇ ರೀತಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸತ್ಯಕ್ಕೆ ಸಾಕ್ಷ್ಯವಾಗಿ ಪ್ಲೇಗ್ ರೋಗದ ಹಾವಳಿಯ ದೃಷ್ಟಾಂತ ಸಹ ಕಾಣಿಸಿತು. ನೀರಿನ ಕಾಲುವೆಗಳು ನಿರ್ಮಾಣಗೊಳ್ಳುವ ದೃಷ್ಟಾಂತ ಈಡೇರಿದುವು. ಹೊಸದಾಗಿ ನಿರ್ಮಿಸಲ್ಪಡುವ ಜನನಿವೇಶನಗಳ ಬಗ್ಗೆ ಸಹ ಪವಿತ್ರ ಖುರ್‌ಆನಿನ ಭವಿಷ್ಯವಾಣಿಗಳು ಈಡೇರಿದುವು. ಪರ್ವತಗಳು ಸೀಳಲ್ಪಡುವ ದೃಷ್ಟಾಂತ, ಪತ್ರಿಕೆಗಳು ಮತ್ತು ಪುಸ್ತಕಗಳು ಪ್ರಕಟಿಸಲ್ಪಡುವ ದೃಷ್ಟಾಂತ, ಹೊಸ ಸವಾರಿ ವಾಹನಗಳ ಆವಿಷ್ಕಾರದ ಬಗ್ಗೆ ಭವಿಷ್ಯವಾಣಿಗಳು ಈಡೇರಿದುವು. ಪವಿತ್ರ ಖುರ್‌ಆನ್ ಮತ್ತು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ವಿವರಿಸಿದ ಅನೇಕ ದೃಷ್ಟಾಂತಗಳ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ವಿಶದೀಕರಿಸಿರುವರು.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಜನರು ದೃಷ್ಟಾಂತಗಳನ್ನು ಮತ್ತು ಅಲ್ಲಾಹನು ನೀಡಿದ ಸಹಾಯಗಳನ್ನು ನೋಡದೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ವಿರುದ್ಧ ಸುಳ್ಳು ಮತ್ತು ಅಪಹಾಸ್ಯದಿಂದ ತುಂಬಿದ ಸಣ್ಣಪುಟ್ಟ ಆಕ್ಷೇಪಗಳನ್ನು ಮಾಡುತ್ತಾರೆ. ಕೆಲವರು ಹೇಳಿದರು, ಅವರ ಪಗಡಿ ನೇರವಾಗಿಲ್ಲ. ಅವರು ಹೇಗೆ ತಾನೆ ಮಸೀಹ್ ಮೌಊದ್ ಆಗಲು ಸಾಧ್ಯ? ಎಂದು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅನೇಕಾನೇಕ ಅದ್ಭುತ ದೃಷ್ಟಾಂತಗಳನ್ನು ತೋರಿಸಿದರೂ ಕೆಲವರು ಹೇಳಿದರು– ಇವರಿಗೆ ಅರಬಿ ಅಕ್ಷರ **ಖಾಫ್** ಸರಿಯಾಗಿ ಉಚ್ಚರಿಸಲು ಬರುವುದಿಲ್ಲ. ಇವರು ಮಸೀಹ್ ಮೌಊದ್ ಆಗಲು ಹೇಗೆ ತಾನೆ ಸಾಧ್ಯ ಎಂದು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ದೃಷ್ಟಾಂತರಗಳ ಮೇಲೆ ದೃಷ್ಟಾಂತಗಳನ್ನು ತೋರಿಸಿದರೂ ಕೆಲವರು ಹೇಳಿದರು, ಈ ವ್ಯಕ್ತಿ ಪತ್ನಿಗೆ ಆಭರಣಗಳನ್ನು ಮಾಡಿಸಿದ್ದಾರೆ; ಬಾದಾಮ್, ತುಪ್ಪ, ಉಪಯೋಗಿಸುತ್ತಿದ್ದಾರೆ. ಇಂತಹ ವ್ಯಕ್ತಿಯನ್ನು ಮಸೀಹ್ ಮೌಊದ್ ಎಂದು ಹೇಗೆ ನಂಬುವುದು. ಕೆಲವು ಜನರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಬಳಿಗೆ ಬಂದು ಹೇಳುತ್ತಿದ್ದರು: ನಮಗೆ ಒಂದು ದೃಷ್ಟಾಂತ ತೋರಿಸಿರಿ ಎಂದು. ಆಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಿದ್ದರು: ಹಿಂದೆ ತೋರಿಸಿದ ದೃಷ್ಟಾಂತಗಳಿಂದ ನೀವು ಏನಾದರೂ ಪ್ರಯೋಜನ ಪಡೆದಿರುವಿರೇನು? ಹಿಂದೆ ತೋರಿಸಲಾದ ಸಾವಿರಾರು ದೃಷ್ಟಾಂತಗಳಿಂದ ನೀವು ಯಾವುದೇ ಲಾಭ ಪಡೆಯದಿರುವಾಗ ಬೇರೆ ಒಂದರಿಂದ ಹೇಗೆ ತಾನೆ ಲಾಭ ಪಡೆಯುವಿರಿ. ಇಂತಹ ಜನರು ಯಾವಾಗಲೂ ಸತ್ಯದಿಂದ ವಂಚಿತರಾಗುತ್ತಾರೆ. ಅವರ ಅದೃಷ್ಟವೇ ಹಾಗಿರುತ್ತದೆ.

ಒಂದು ಮಹತ್ವಪೂರ್ಣ ದೃಷ್ಟಾಂತ. ಅದು ಪ್ರತಿದಿನ ಈಡೇರುತ್ತಾ ಇರುತ್ತದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳಿದ್ದಾರೆ: ಅಲ್ಲಾಹನು

ಇಲ್‌ಹಾಮ್ ಮೂಲಕ ನನಗೆ ಒಂದು ಪ್ರಾರ್ಥನೆ ಕಲಿಸಿದ್ದಾನೆ. ಅದು ಹೀಗೆ– **ರಬ್ಬಿ ಲಾತಝುರ್‌ನೀ ಫರ್ದನ್, ವಅನ್‌ತ ಖೈರುಲ್ ವಾರಿಸೀನ್.** 'ನೀನು ನನ್ನನ್ನು ಒಬ್ಬಂಟಿಗನನ್ನಾಗಿ ಮಾಡಬೇಡ. ಒಂದು ಜಮಾಅತನ್ನಾಗಿ ಮಾಡು.'

ಇನ್ನೊಂದು ಇಲ್‌ಹಾಮ್ ಹೀಗಿದೆ: **ಯಅ್‌ತೀಕ ಮಿನ್‌ಕುಲ್ಲಿ ಫಜ್ಜಿನ್ ಅಮೀಖ್.** 'ಎಲ್ಲ ದಿಕ್ಕುಗಳಿಂದ ಅತಿಥಿಗಳಿಗೆ ಆವಶ್ಯಕವಾಗಿರುವ ಸಾಧನ ಸಾಮಗ್ರಿಗಳನ್ನು ಅಲ್ಲಾಹನು ಸ್ವತಃ ನಿನಗೆ ಒದಗಿಸಿ ಕೊಡುವನು.'

ಇನ್ನೊಂದು ಇಲ್‌ಹಾಮ್ ಹೀಗಿದೆ: **ಯಅ್‌ತೂನ ಮಿನ್‌ಕುಲ್ಲಿ ಫಜ್ಜಿನ್ ಅಮೀಖ್.** 'ಜನರು ಪ್ರತಿಯೊಂದು ಮಾರ್ಗದ ಮೂಲಕ ನಿನ್ನ ಸಮೀಪ ಆಗಮಿಸುವರು.'

ಈ ಭವಿಷ್ಯವಾಣಿಗಳು ಇಂದಿನ ತನಕ ಬಹಳ ವೈಭವಶಾಲಿಯಾಗಿ ಈಡೇರುತ್ತಾ ಇರುವುದನ್ನು ನಾವು ಕಾಣುತ್ತೇವೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಜಮಾಅತ್ ಪ್ರತಿದಿನ ಅಭಿವೃದ್ಧಿ ಹೊಂದುತ್ತಾ ಇರುವುದು, ಜಮಾಅತಿನ ಜನರು ಆರ್ಥಿಕ ಬಲಿದಾನಗಳನ್ನು ಅರ್ಪಿಸುತ್ತಾ ಮುಂದುವರಿಯುತ್ತಿರುವುದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸತ್ಯತೆಗೆ ಬಲವತ್ತಾದ ಒಂದು ಸಾಕ್ಷ್ಯವಾಗಿದೆ. ಅದು ಒಂದು ದೃಷ್ಟಾಂತವಾಗಿದೆ. ಆದರೆ ಆ ದೃಷ್ಟಾಂತವನ್ನು ಕಣ್ಣಿದ್ದವರೇ ಕಾಣಬಲ್ಲರು. ಅಂಧರಾದವರಿಗೆ ಅದು ಕಾಣಿಸಲಾರದು.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಅಹ್ಮದಿಯ್ಯತ್ತಿನ ಅಭಿವೃದ್ಧಿ ಮತ್ತು ಜಮಾಅತಿನ ಪ್ರಗತಿ ಬಗ್ಗೆ ದೊರೆತ ಕೆಲವು ಇಲ್‌ಹಾಮ್‌ಗಳನ್ನು ಉಲ್ಲೇಖಿಸಿ ಹೇಳಿದ ವಿಷಯಗಳಲ್ಲಿ ಕೆಲವನ್ನು ನಿಮ್ಮ ಮುಂದೆ ಇರಿಸುತ್ತೇನೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ಅಲ್ಲಾಹನು ನಿರಂತರವಾಗಿ ಹೀಗೆ ಹೇಳಿದ್ದನು. ಹಿಂದಿನ ಕಾಲದ ಪ್ರವಾದಿಗಳ ಜಮಾಅತ್ ಮಾಡಿದಂತಹ ಬಲಿದಾನಗಳನ್ನು ಅಹ್ಮದಿಯಾ ಜಮಾಅತ್ ಸಹ ಮಾಡಬೇಕಾದೀತು ಎಂದು. ಒಮ್ಮೆ ಹಝ್ರತ್ ಮಸೀಹ್ ಮೌಊದ್ ಒಂದು ಸ್ವಪ್ನದಲ್ಲಿ ತಾನು ನಿಝಾಮುದ್ದೀನರ ಮನೆಗೆ ಪ್ರವೇಶಿಸಿರುವುದಾಗಿ ಕಂಡರು. ನಿಝಾಮುದ್ದೀನ್ ಎಂದರೆ ದೀನಿನ ನಿಝಾಮ್ ಎಂದಾಗಿದೆ. ಈ ಸ್ವಪ್ನದ ಅರ್ಥ ಹೀಗೆ: ಅಹ್ಮದಿಯಾ ಜಮಾಅತ್ ಮುಂದೆ ಒಂದು ದೀನೀ ನಿಝಾಮ್ ಆಗುವುದು. ಒಂದು ಕಾಲದಲ್ಲಿ ಅದು ಲೋಕದ ಇತರ ಎಲ್ಲ ನಿಝಾಮ್‌ಗಳ ಮೇಲೆ ಜಯಗಳಿಸುವುದು– ಇನ್‌ಶಾಅಲ್ಲಾಹ್. ಆದರೆ ಈ ಜಯಸಿಗುವುದು ಹೇಗೆ? ಇದಕ್ಕೆ ಸಂಬಂಧಿಸಿ ಈ ಸ್ವಪ್ನದ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ನಾವು ಈ ಮನೆಯನ್ನು ಹಸನೀ ರೀತಿಯಲ್ಲಿ (ಎಂದರೆ ಹಝ್ರತ್ ಹಸನ್ ರಝಿಯಲ್ಲಾಹು ಅನ್‌ಹುರವರ ರೀತಿಯಲ್ಲಿ) ಮತ್ತು ಹುಸೈನೀ ರೀತಿಯಲ್ಲಿ (ಹಝ್ರತ್ ಹುಸೈನ್ ರಝಿಯಲ್ಲಾಹು ಅನ್‌ಹುರವರ ರೀತಿಯಲ್ಲಿ) ಪ್ರವೇಶಿಸುವೆವು. ಹಝ್ರತ್ ಹಸನ್ ರಝಿಯಲ್ಲಾಹು ಅನ್‌ಹುರವರ ರೀತಿ ಶಾಂತಿ ಮತ್ತು ಸಮಾಧಾನವಾಗಿತ್ತೆಂದೂ ಹಝ್ರತ್ ಹುಸೈನ್ ರಝಿಯಲ್ಲಾಹು ಅನ್‌ಹುರವರ ರೀತಿ ಶಹಾದತ್ ಎಂದೂ ಎಲ್ಲರಿಗೂ ತಿಳಿದ ವಿಷಯವಾಗಿದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಅಲ್ಲಾಹನು ತಿಳಿಸಿರುವುದರ ಅರ್ಥವೇನೆಂದರೆ ಅಹ್ಮದಿಯಾ ಜಮಾಅತ್ ಖಂಡಿತವಾಗಿಯೂ ನಿಝಾಮುದ್ದೀನ್ ಸ್ಥಾನವನ್ನು ಪಡೆಯುವುದು. ಆದರೆ ಅದು ಸಾಧ್ಯವಾಗುವುದು, ಶಾಂತಿ ಸೌಹಾರ್ದ ಮತ್ತು ಪ್ರೀತಿಯ ಮೂಲಕವೂ ಅದೇರೀತಿ ಕೆಲವು ಶಹಾದತ್ (ರಕ್ತ ಸಾಕ್ಷಿತ್ವ) ಮತ್ತು ಬಲಿದಾನಗಳ ಮೂಲಕವೂ ಆಗಿದೆ. ಶಾಂತಿ, ಸೌಹಾರ್ದ ಮತ್ತು ಸಮಾಧಾನದ ಸಹಾಯವಿಲ್ಲದೆ ಈ ಜಮಾಅತ್ ಅಭಿವೃದ್ಧಿಗೊಳ್ಳುವುದು ಎಂದು ಯಾರಾದರೂ ಭಾವಿಸುವುದಾದರೆ ಅವನ ಅಭಿಪ್ರಾಯ ತಪ್ಪಾಗಿದೆ. ಅದೇರೀತಿ, ಬಲಿದಾನ ನೀಡದೆ, ಶಹೀದರಾಗದೆ, ಈ ಜಮಾಅತ್ ಅಭಿವೃದ್ಧಿ ಹೊಂದುವುದು ಎಂದು ಯಾರಾದರೂ ಭಾವಿಸುವುದಾದರೆ ಅವನ ಭಾವನೆ ಸಹ ತಪ್ಪಾಗಿದೆ. ನಾವು ಕೆಲವು ಸಾರಿ ಶಾಂತಿ ಸೌಹಾರ್ದದ ಮಾರ್ಗವನ್ನು ಅವಲಂಬಿಸಬೇಕಾಗಿದೆ. ಕೆಲವು ಸಾರಿ ಹುಸೈನೀ ವಿಧಾನವನ್ನು ಅನುಸರಿಸಬೇಕಾಗಬಹುದು. ಅಂದರೆ ನಾವು ನಮ್ಮ ಶತ್ರುವಿನ ಮಾತನ್ನು ಅಂಗೀಕರಿಸದೆ ಅವನ ಮುಂದೆ ಶಹೀದರಾಗಬೇಕಾಗುತ್ತದೆ. ಈ ಎರಡೂ ವಿಧಾನಗಳ ಉದಾಹರಣೆ ಇಂದು ಅಹ್ಮದಿಯಾ ಜಮಾಅತಿನ ಜನರು ತೋರಿಸುತ್ತಿದ್ದಾರೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಜೊತೆಗೆ ಒಬ್ಬನೇ ಒಬ್ಬ ಅನುಯಾಯಿ ಕೂಡ ಇಲ್ಲದ ಕಾಲದಲ್ಲಿ ಅವರು ಹೀಗೆ ಹೇಳಿದರು: ನನಗೆ ಅಲ್ಲಾಹನು ತಿಳಿಸಿರುವನು ನಿನ್ನ ಜಮಾಅತನ್ನು ಎಷ್ಟು ವರ್ಧಿಸುವೆನೆಂದರೆ ಲೋಕದ ಇತರ ಜನಾಂಗಗಳು ಹಿಂದಿನ ಕಾಲದ ಬುಡಕಟ್ಟು ಜನಾಂಗಗಳಂತೆ ಆಗಿ ಬಿಡುವರು.

ಅಲ್ಲಾಹನ ಸಹಾಯದ ದೃಶ್ಯಗಳನ್ನು ನಾವು ಪ್ರತಿದಿನ ಕಾಣುತ್ತಿದ್ದೇವೆ. ಇನ್‌ಶಾಅಲ್ಲಾಹ್ ಮುಂದೆ ನಾವು ಇಂತಹ ಒಂದು ದೃಶ್ಯ ನಿಶ್ಚಯವಾಗಿಯೂ ಕಾಣುವೆವು. ಆಗ ಇತರ ಜನಾಂಗಗಳು ಸಾಮಾನ್ಯ ಸ್ಥಾನದಲ್ಲಿರುವುವು. ಆದರೆ ಇದಕ್ಕೋಸ್ಕರ ನಾವು ನಮ್ಮಲ್ಲಿಯೂ ನಮ್ಮ ಮಕ್ಕಳಲ್ಲಿಯೂ ಧರ್ಮದ ಆತ್ಮವನ್ನು ಊದುವ ಆವಶ್ಯಕತೆ ಇದೆ. ಆ ಮೂಲಕ ಅಲ್ಲಾಹನು ನಮಗೆ ಈ ದೃಶ್ಯ ತೋರಿಸುವನು. ಅಲ್ಲಾಹನ ಸಹಾಯ ದೊರೆಯುತ್ತಿರುವಾಗ ವಿರೋಧಿಗಳು ಸಹ ಇರುತ್ತಾರೆ. ಪ್ರವಾದಿಗಳ ಜಮಾಅತಿನ ವಿರುದ್ಧ ಇಂತಹ ವಿರೋಧಗಳು ಯಾವಾಗಲೂ ಇರುತ್ತವೆ. ಆದರೆ ಶತ್ರುಗಳ ವಿರೋಧಗಳು ನಮ್ಮನ್ನು ಭಯಪಡಿಸುವುದಿಲ್ಲ. ಅವು ನಮ್ಮ ವಿಶ್ವಾಸವನ್ನು ಬಲಪಡಿಸುತ್ತವೆ.

ಕೆಲವು ದಿನಗಳ ಹಿಂದೆ ರಬ್ವದಲ್ಲಿ ತಹ್‌ರೀಕ್ ಜದೀದ್ ಕಚೇರಿಯನ್ನು ಮತ್ತು ಝಿಯಾಉಲ್ ಇಸ್ಲಾಮ್ ಪ್ರೆಸ್ಸನ್ನು ಸರಕಾರದ ಪೋಲೀಸಿನ ವಿಶಿಷ್ಟ ವಿಭಾಗ ರೈಡ್ ಮಾಡಿತು. ಇಬ್ಬರು ಮುರಬ್ಬಿಗಳನ್ನೂ ಕೆಲವು ಸಿಬ್ಬಂದಿಗಳನ್ನೂ ಬಂಧಿಸಿ ಕರೆದುಕೊಂಡು ಹೋದರು. ಈ ಘಟನೆ ಬಗ್ಗೆ ರಬ್ವದಿಂದ ಕೆಲವರು ನನಗೆ ಪತ್ರ ಬರೆದಿದ್ದಾರೆ. ಪತ್ರ ಬರೆದವರಲ್ಲಿ

ಮಹಿಳೆಯರೂ ಇದ್ದಾರೆ. ನಾವು ಭಯಭೀತರಾಗಿಲ್ಲ. ನಮ್ಮ ವಿಶ್ವಾಸ ಬಲವತ್ತಾಗಿದೆ. ಅದು ಯಾವಾಗಲೂ ಬಲಿಷ್ಠವಾಗಿರುವುದು. ನಾವು ಪ್ರತಿಯೊಂದು ಕಷ್ಟವನ್ನು ಎದುರಿಸುವೆವು ಮತ್ತು ಬಲಿದಾನ ನೀಡುವೆವು ಎಂದು ಅವರು ಬರೆದಿದ್ದಾರೆ.

ಸತ್ಯವಿಶ್ವಾಸಿಗಳಲ್ಲಿರಬೇಕಾದ ಭಾವನೆ ಇದೇ ಆಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿರುವುದು ಇಂತಹ ಬಲಿದಾನಗಳ ಬಗ್ಗೆಯೇ ಆಗಿದೆ. ಅಲ್ಲಾಹನ ವಾಗ್ದಾನಗಳಿವೆ. ನಾವು ಅಸಂಖ್ಯಾತ ಸಹಾಯದ ದೃಶ್ಯಗಳನ್ನು ಕಾಣುತ್ತಿದ್ದೇವೆ. ಕೊನೆಯ ವಿಜಯ ಸಿಗುವುದು ಖಂಡಿತವಾಗಿಯೂ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಜಮಾಅತಿಗಾಗಿದೆ. ವಿರೋಧಗಳು ಉಂಟಾಗುತ್ತವೆ ಮತ್ತು ಉಂಟಾಗುವುವು. ವಾಸ್ತವಿಕವಾಗಿ ಭಯೋತ್ಪಾದಕರಾಗಿರುವ ಈ ಮೌಲವಿಗಳಿಂದ ಅಲ್ಲಾಹನು ಆ ದೇಶವನ್ನು ರಕ್ಷಿಸಲಿ. ಅವರು ದೇಶದಲ್ಲಿ ಗಲಬೆ ಗೊಂದಲಗಳನ್ನು ಹರಡಿದ್ದಾರೆ. ಯಾವುದೇ ಜೀವ ಅವರ ಆಕ್ರಮಣಗಳಿಂದ ಸುರಕ್ಷಿತವಾಗಿಲ್ಲ. ಅಹ್ಮದಿಯರು ತಮ್ಮ ಜೀವವನ್ನು ಬಲಿದಾನ ನೀಡುತ್ತಾ ಇದ್ದಾರೆ. ಅಲ್ಲಾಹನು ಬೇಗನೆ ಈ ಬಲಿದಾನಗಳಿಗೆ ಫಲ ನೀಡುವನು– ಇನ್‌ಶಾಅಲ್ಲಾಹ್.

ಅಲ್‌ಜೀರಿಯಾದಲ್ಲಿ ಸಹ ಸರಕಾರದ ಕಡೆಯಿಂದ ಅಹ್ಮದಿಯರ ವಿರುದ್ಧ ದೌರ್ಜನ್ಯ ನಡೆಯುತ್ತಾ ಇದೆ. ಅಲ್ಲಾಹನು ಅಹ್ಮದಿಯರನ್ನು ರಕ್ಷಿಸಲಿ ಮತ್ತು ಅವರಿಗೆ ಸ್ಥಿರಚಿತ್ತತೆಯನ್ನೂ ದಯಪಾಲಿಸಲಿ. ಅಲ್ಲಿನ ಸರಕಾರಕ್ಕೆ ಸಹ ಅಲ್ಲಾಹನು ವಿವೇಕ ನೀಡಲಿ. ಶಾಂತಿ ಪ್ರಿಯರೂ ನಿಯಮಗಳನ್ನು ಪಾಲಿಸುವವರೂ ಆದ ಅಹ್ಮದಿಯರ ಸ್ಥಿತಿಯನ್ನು ಅವರು ಅರಿತುಕೊಳ್ಳುವವರಾಗಲಿ. ಅಹ್ಮದಿಯರು ಸರಕಾರದ ವಿರುದ್ಧ ಗೂಡಾಲೋಚನೆ ನಡೆಸುತ್ತಿದ್ದಾರೆ ಅಥವಾ ದೇಶದಲ್ಲಿ ಗಲಬೆ ಗೊಂದಲಗಳನ್ನು ಉಂಟುಮಾಡಲು ಪ್ರಯತ್ನಿಸುತ್ತಿದ್ದಾರೆ ಎಂದು ದೋಷಾರೋಪ ಮಾಡಲಾಗುತ್ತಿದೆ. ಆದರೆ ವಾಸ್ತವದಲ್ಲಿ ಲೋಕದಲ್ಲಿ ಎಲ್ಲಿಯಾದರೂ ಒಬ್ಬ ಅಹ್ಮದಿ ಎಂದೂ ತನ್ನ ದೇಶದ ನಿಯಮಗಳ ವಿರುದ್ಧ ಹೋರಾಡುವವನಾಗಿರುವುದಿಲ್ಲ. ಅವರು ಸರಕಾರದ ವಿರುದ್ಧ ಸಹ ಹೋರಾಡುವವರಾಗಿರುವುದಿಲ್ಲ. ನಾವು ಶಾಂತಿ, ಸೌಹಾರ್ದ ಮತ್ತು ಪ್ರೀತಿಯನ್ನು ಹರಡುವವರಾಗಿದ್ದೇವೆ. ಹೌದು, ಅದಕ್ಕೋಸ್ಕರ ಬಲಿದಾನ ನೀಡುವುದು ಆವಶ್ಯಕವಾದರೆ ಬಲಿದಾನ ನೀಡಲು ಸಹ ನಾವು ತಯಾರಿದ್ದೇವೆ– ಇನ್‌ಶಾಅಲ್ಲಾಹ್.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತನ್ನ ಸಂಬಂಧಿಕರ ವಿರೋಧಗಳ ಬಗ್ಗೆ ವಿವರಿಸುತ್ತಾ ಹೇಳಿದರು: ನನಗೆ ಅಲ್ಲಾಹನು ತಿಳಿಸಿದ್ದಾನೆ, ನಿನ್ನ ಹೊರತು ಈ ಕುಟುಂಬದ ಎಲ್ಲರೂ ಸಂತಾನ ಹೀನರಾಗುವರು ಎಂದು. ವಿರೋಧಗಳು ಉಂಟಾದುವು. ಆದರೆ ಅಲ್ಲಾಹನು ಸಮಾಧಾನ ನೀಡಿದನು. ನಿನ್ನ ಮೂಲಕವೇ ಈ ವಂಶ ಬೆಳೆಯುವುದು. ಉಳಿದವರೆಲ್ಲರೂ ಸಂತಾನ ರಹಿತರಾಗುವರು. ಹಾಗೆಯೇ ಸಂಭವಿಸಿತು. ಈ ಕುಟುಂಬದವರಲ್ಲಿ ಅಹ್ಮದಿಯಾ ಜಮಾಅತಿಗೆ ಸೇರಿದವರು ಮಾತ್ರ ಬಾಕಿಯಾಗಿ ಉಳಿದಿದ್ದಾರೆ. ಉಳಿದವರೆಲ್ಲರೂ ಸಂತಾನ ರಹಿತರಾದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತನ್ನ ವಾದ ಪ್ರಕಟಿಸಿದಾಗ ಅವರ ಕುಟುಂಬದಲ್ಲಿ ಎಪ್ಪತ್ತರಷ್ಟು ಪುರುಷರಿದ್ದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಶಾರೀರಿಕ ಮತ್ತು ಆಧ್ಯಾತ್ಮಿಕ ಪುತ್ರರ ಹೊರತು ಉಳಿದವರಲ್ಲಿ ಯಾರೊಬ್ಬನ ಸಂತಾನವೂ ಬಾಕಿಯಾಗಿ ಮುಂದುವರಿಯಲಿಲ್ಲ. ಅವರೆಲ್ಲರೂ ಸಂತಾನ ರಹಿತರಾಗಿ ಅಳಿದು ಹೋದರು. ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಹೆಸರನ್ನು ಅಳಿಸಿ ಬಿಡಲು ತಮ್ಮಿಂದಾದ ಎಲ್ಲ ಪ್ರಯತ್ನಗಳನ್ನೂ ಮಾಡಿದ್ದರು. ಆದರೆ, ಫಲವೇನಾಯಿತು? ಅವರೇ ನಾಶವಾಗಿ ಹೋದರು. ಇದು ಸಹ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸತ್ಯತೆಗೆ ವೈಭವಶಾಲಿ ದೃಷ್ಟಾಂತವಾಗಿದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಹಿರಿಯ ಸಹೋದರನ ಪತ್ನಿ ಬೈಅತ್ ಮಾಡಿದ ಬಗ್ಗೆ ವಿವರಿಸುತ್ತಾ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಬರೆಯುತ್ತಾರೆ: ಕೆಲವು ಭವಿಷ್ಯವಾಣಿಗಳು ಮತ್ತು ದೃಷ್ಟಾಂತಗಳು ಬಾಹ್ಯವಾಗಿ ಚಿಕ್ಕದಾಗಿರುತ್ತವೆ. ಆದರೆ ಅವುಗಳ ಬಗ್ಗೆ ಚಿಂತಿಸುವವರಿಗೆ ಅವುಗಳಲ್ಲಿ ಎಂತಹ ವಿಷಯಗಳು ಅಡಕವಾಗಿರುತ್ತವೆ ಎಂದರೆ ಅವುಗಳು ವಿಶ್ವಾಸವನ್ನು ವರ್ಧಿಸುವವುಗಳಾಗಿರುತ್ತವೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಒಂದು ಇಲ್‌ಹಾಮ್ ಹೀಗಿತ್ತು: **ತಾಯೀ ಆಯೀ** (ದೊಡ್ಡಮ್ಮ ಆಗಮಿಸಿದರು). ಇದು ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹುರವರ ದೊಡ್ಡಮ್ಮನವರ ಬಗ್ಗೆಯಾಗಿತ್ತು. ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಅಣ್ಣನ ಪತ್ನಿಯಾಗಿದ್ದರು. ಈ ಭವಿಷ್ಯವಾಣಿಯ ಶಬ್ದಗಳು ಸೂಚಿಸುವುದೇನೆಂದರೆ ಅವರು ಬೈಅತ್ ಮಾಡುವಾಗ ಬೈಅತ್ ಪಡೆಯುವವರಿಗೆ ಅವರು **ತಾಯೀ** (ದೊಡ್ಡಮ್ಮ) ಆಗಿರುವರು. ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಕಾಲದಲ್ಲಿ ಬೈಅತ್ ಮಾಡಿರುತ್ತಿದ್ದರೆ ಇಲ್‌ಹಾಮ್ ಶಬ್ದ ಹೀಗೆ ಇರಬೇಕಾಗಿತ್ತು– 'ಭಾವಜ್ ಆಯೀ' ಎಂದು. ಅಥವಾ ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್‌ರವರ ಕಾಲದಲ್ಲಿ ಅವರು ಬೈಅತ್ ಮಾಡುವವರಾಗಿದ್ದರೆ ಅದರ ಬಗ್ಗೆ ಹೀಗೆ ಹೇಳಲಾಗುತ್ತಿತ್ತು: 'ಮಸೀಹ್ ಮೌಊದರ ಕುಟುಂಬದ ಒಬ್ಬ ಮಹಿಳೆ ಆಗಮಿಸಿದರು' ಎಂದು. **ತಾಯೀ ಆಯೀ** ಎಂಬ ಇಲ್‌ಹಾಮ್ ಸೂಚಿಸುವುದೇನೆಂದರೆ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಪುತ್ರ ಖಲೀಫರಾಗಿರುವಾಗ ಅವರ ದೊಡ್ಡಮ್ಮ ಬೈಅತ್ ಮಾಡುವರು ಎಂದು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಮಕ್ಕಳಲ್ಲಿ ಯಾರೂ ಖಲೀಫರಾಗದಿರುತ್ತಿದ್ದರೆ ಈ ಇಲ್‌ಹಾಮ್ ಶಬ್ದಗಳು ನಿರರ್ಥಕವಾಗುತ್ತಿದ್ದುವು.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ವಾಸ್ತವದಲ್ಲಿ ಈ ಇಲ್‌ಹಾಮ್‌ನಲ್ಲಿ ಮೂರು ಭವಿಷ್ಯವಾಣಿಗಳು ಅಡಕವಾಗಿವೆ. ಒಂದನೆಯ

ಭವಿಷ್ಯವಾಣಿ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಪುತ್ರರಲ್ಲಿ ಒಬ್ಬರು ಖಲೀಫರಾಗುವರು ಎಂದು. ಎರಡನೆಯ ಭವಿಷ್ಯವಾಣಿ, ಆ ಸಮಯದಲ್ಲಿ ಖಲೀಫರ ದೊಡ್ಡಮ್ಮ ಬೈಅತ್ ಮಾಡುವರು. ಮೂರನೆಯ ಭವಿಷ್ಯವಾಣಿ, ದೊಡ್ಡಮ್ಮನವರ ಆಯುಸ್ಸಿನ ಬಗ್ಗೆ ಭವಿಷ್ಯವಾಣಿಯಾಗಿದೆ. ಈ ಇಲ್‌ಹಾಮ್ ದೊರೆತಾಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಪ್ರಾಯ ಅಂದಾಜು ಎಪ್ಪತ್ತು ಆಗಿತ್ತು. ಆ ಸಮಯದಲ್ಲಿ ಅವರ ಅತ್ತಿಗೆಯ ಪ್ರಾಯ ಅವರಿಗಿಂತ ಹೆಚ್ಚಾಗಿತ್ತು. ತನ್ನ ಪುತ್ರನೊಬ್ಬ ಖಲೀಫನಾಗುವಾಗ ಈ ಮಹಿಳೆ ಜೀವಿಸಿರುವರೆಂದೂ ಅವರು ಬೈಅತ್ ಮಾಡುವರೆಂದೂ ಈ ಇಲ್‌ಹಾಮ್‌ನಲ್ಲಿ ಸೂಚಿಸಲಾಗಿದೆ. ಇಷ್ಟು ದೀರ್ಘಾಯುಸ್ಸು ಪಡೆಯುವುದು ಬಹಳ ಮಹತ್ವಪೂರ್ಣವಾಗಿವೆ. ಒಬ್ಬ ಯುವಕನ ಬಗ್ಗೆ ಸಹ ಅವನು ಇಂತಿಷ್ಟು ಆಯುಸ್ಸು ಪಡೆಯುವನು ಎಂದು ಯಾರಿಗೂ ಹೇಳಲು ಸಾಧ್ಯವಿಲ್ಲ. ಹೀಗಿರುವಾಗ ವೃದ್ಧರ ಬಗ್ಗೆ ಹೇಳಲು ಹೇಗೆ ತಾನೆ ಸಾಧ್ಯ. ಈ ದೊಡ್ಡಮ್ಮ 1927ರಲ್ಲಿ ನಿಧನ ಹೊಂದಿದರು.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಈ ಭವಿಷ್ಯವಾಣಿ ಬಹಳ ದೊಡ್ಡ ದೃಷ್ಟಾಂತವಾಗಿದೆ. ಅವರು ನನ್ನ ಕಾಲದಲ್ಲಿ ಬೈಅತ್ ಮಾಡಿದುದು, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಪುತ್ರರಲ್ಲೊಬ್ಬ ಖಲೀಫನಾಗಿರುವಾಗ ಬೈಅತ್ ಮಾಡಿದುದು, ಮಹತ್ವಪೂರ್ಣವಾಗಿದೆ. ಈ ಎರಡು ಶಬ್ದಗಳಲ್ಲಿ ಅನೇಕ ಭವಿಷ್ಯವಾಣಿಗಳು ಅಡಕವಾಗಿವೆ. ತಾಯೀ ಸಾಹಿಬ ಬೈಅತ್ ಮಾಡಿದ ನಂತರ ವಸಿಯ್ಯತ್ ಸಹ ಮಾಡಿದರು. ಹಾಗೆ ಅವರನ್ನು ಬಿಹಿಶ್ತಿ ಮಖ್‌ಬರದಲ್ಲಿ ದಫನ ಮಾಡಲಾಯಿತು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ದೆಹಲಿ ಸಂದರ್ಶಿಸಿದ ಬಗ್ಗೆ ವಿವರಿಸುತ್ತಾ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೀಗೆ ಹೇಳುತ್ತಾರೆ: ''ನಾನು ತುಂಬಾ ಚಿಕ್ಕವನಾಗಿದ್ದೆ. ದೆಹಲಿಯಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಸಂತರ ಗೋರಿಗಳನ್ನು ಸಂದರ್ಶಿಸಿ ದೀರ್ಘ ಸಮಯ ಪ್ರಾರ್ಥಿಸುತ್ತಾ ಇದ್ದರು. ಅವರು ಹೇಳಿದರು: ನಾನು ಪ್ರಾರ್ಥಿಸುವುದು ಏಕೆಂದರೆ ಈ ಮಹಾನುಭಾವರ ಆತ್ಮಗಳು ಉತ್ಸಾಹ ಭರಿತವಾಗಲಿ ಎಂದು. ಈ ಕಾಲಘಟ್ಟದಲ್ಲಿ ಮಾರ್ಗದರ್ಶನ ನೀಡಲು ಅಲ್ಲಾಹನು ಕಳುಹಿಸಿದ ಪ್ರಕಾಶದಿಂದ ಅವರ ಸಂತಾನಕ್ಕೆ ಸೇರಿದವರು ವಂಚಿತರಾಗದಿರಲಿ ಎಂದು ನಾನು ಪ್ರಾರ್ಥಿಸುತ್ತಿದ್ದೇನೆ. ನಿಶ್ಚಯವಾಗಿಯೂ ಮುಂದೆ ಒಂದು ಕಾಲದಲ್ಲಿ ಅಲ್ಲಾಹನು ಈ ಜನರ ಹೃದಯಗಳನ್ನು ತೆರೆಯುವನು. ಮತ್ತು ಅವರು ಸತ್ಯವನ್ನು ಸ್ವೀಕರಿಸುವರು ಎಂದು ಹೇಳಿದರು. ನಾನು ಆಗ ಚಿಕ್ಕವನಾಗಿದ್ದರೂ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಮಾತುಗಳ ಪ್ರಭಾವ ಈಗ ಸಹ ನನ್ನ ಮೇಲಿದೆ.''

ಆದುದರಿಂದ ಈಗ ದೆಹಲಿಯ ಜಮಾಅತಿನ ಕಡ್ಡಾಯ ಕರ್ತವ್ಯವೆಂದರೆ, ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸಂದೇಶವನ್ನು ಜಾಣ್ಮೆಯಿಂದ ಜನರಿಗೆ ತಲಪಿಸಬೇಕು. ಎಕ್ಸಿಬಿಷನ್ ಮೊದಲಾದವುಗಳ ಮೂಲಕ ತಬ್ಲೀಗ್ ಕಾರ್ಯದಲ್ಲಿ ಸಾಕಷ್ಟು ವೇಗ ತಲೆದೋರಿದೆ. ಆದರೆ ಮುಸ್ಲಿಮರ ಕಡೆಯಿಂದ ವಿರೋಧವೂ ಜಾರಿಯಲ್ಲಿದೆ. ಅವರಿಗೆ ಸಂದೇಶ ತಲಪಿಸುವ ಆವಶ್ಯಕತೆ ಇದೆ. ಇವುಗಳ ಜೊತೆಗೆ ಎಲ್ಲದಕ್ಕಿಂತಲೂ ಮುಖ್ಯವಾಗಿ ಪ್ರಾರ್ಥನೆ (ದುಆ) ಬಗ್ಗೆ ಬಹಳ ಹೆಚ್ಚು ಗಮನ ಹರಿಸಬೇಕಾಗಿದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಂದು ದಿವ್ಯದರ್ಶನದಲ್ಲಿ ಹೀಗೆ ಕಂಡರು: ಉದ್ದವಾಗಿ ಹೊಂಡ ತೋಡಲಾಗಿದೆ. ಅದರ ಬದಿಯಲ್ಲಿ ಕುರಿಗಳನ್ನು ಮಲಗಿಸಲಾಗಿದೆ. ಪ್ರತಿಯೊಂದು ಕುರಿಯ ತಲೆಯ ಬಳಿ ಒಬ್ಬ ಕಟುಕನು ಕತ್ತಿ ಹಿಡಿದು ನಿಂತು ಆಕಾಶದ ಕಡೆಗೆ ಆಜ್ಞೆಯನ್ನು ಪ್ರತೀಕ್ಷಿಸುತ್ತಾ ನೋಡುತ್ತಿದ್ದಾನೆ. ನಾನು ಆ ಸಂದರ್ಭದಲ್ಲಿ ಅಲ್ಲಿ ತಿರುಗಾಡುತ್ತಿದ್ದೆ ಎಂದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ. ಅವರು ಹೇಳುತ್ತಾರೆ: ನಾನು ಅವರ ಬಳಿಗೆ ಹೋಗಿ ಹೇಳಿದೆ: **ಖುಲ್ ಮಾಯಅಬ್‌ಉ ಬಿಕುಮ್ ರಬ್ಬೀ ಲೌಲಾ ದುಆಉಕುಮ್.** (ಹೇಳು: ನಿಮ್ಮ ಪ್ರಾರ್ಥನೆ ಇಲ್ಲದಿದ್ದರೆ ನನ್ನ ಪ್ರಭು ನಿಮ್ಮನ್ನು ಏನು ಗಮನಿಸಲಿಕ್ಕೆ?). ಆಗ ಕತ್ತಿ ಚಲಾಯಿಸಲಾಯಿತು. ಕುರಿಗಳು ಒದ್ದಾಡತೊಡಗಿದುವು. ಆಗ ಕಟುಕರು ಹೇಳಿದರು: ನೀವು ಕೇವಲ ಕೊಳಕು ತಿನ್ನುವ ಕುರಿಗಳಾಗಿರುವಿರಿ. ನಿಮಗೇನೂ ಮಹತ್ವವಿಲ್ಲ. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಈ ದಿವ್ಯದರ್ಶನ ಕಂಡ ಕಾಲಘಟ್ಟದಲ್ಲಿ ಎಪ್ಪತ್ತು ಸಾವಿರ ಜನರು ಕೊಲೆರ ರೋಗದಿಂದ ಮೃತಪಟ್ಟಿದ್ದರು. ಆದುದರಿಂದ ಯಾರಾದರೂ ಸತ್ಯವನ್ನು ಲಕ್ಷಿಸುವುದಿಲ್ಲವಾದರೆ ಅಲ್ಲಾಹನಿಗೆ ಅದರ ಬಗ್ಗೆ ಪರಿವೆ ಇಲ್ಲ. ಅವನ ಕೆಲಸ ತಡೆಯಲ್ಪಡಲಾರದು. ಅದು ಮುಂದುವರಿಯುತ್ತಾ ಇರುವುದು. ಹಝ್ರತ್ ಈಸಾ ಮಸೀಹರು ಆಗಮಿಸಿ ಮುನ್ನೂರು ವರ್ಷಗಳ ನಂತರ ಕ್ರೈಸ್ತ ಧರ್ಮಕ್ಕೆ ಅಭಿವೃದ್ಧಿ ಲಭಿಸಿತು. ಆದರೆ ನಮ್ಮ ಸ್ಥಿತಿಯನ್ನು ನೋಡುವಾಗ ಅಷ್ಟು ವರ್ಷಗಳು ದಾಟಿ ಹೋಗುವ ಮೊದಲೇ ಇನ್‌ಶಾಅಲ್ಲಾಹ್ ಅಹ್ಮದಿಯ್ಯತ್‌ಗೆ ಅಭಿವೃದ್ಧಿ ಲಭಿಸುವುದು.

ಪಾಕಿಸ್ಥಾನದ ಮೌಲವಿಗಳಾಗಲಿ ಇತರ ಯಾವ ಧಾರ್ಮಿಕ ನಾಯಕರೇ ಆಗಲಿ, ಲೌಕಿಕ ಶಕ್ತಿಗಳಾಗಲಿ ಅವರಿಗೆ ಅಲ್ಲಾಹನ ಸನ್ನಿಧಿಯಲ್ಲಿ ಯಾವ ಸ್ಥಾನವೂ ಇಲ್ಲ. ಅವರು ಕುರಿಗಳ ಹಾಗೆ ಇದ್ದಾರೆ. ಈ ಜನರು ಅಹ್ಮದಿಯ್ಯತ್ತಿನ ಅಭಿವೃದ್ಧಿಯ ಮಾರ್ಗವನ್ನು ತಡೆಗಟ್ಟಲು ಎಂದಿಗೂ ಸಮರ್ಥರಲ್ಲ. ಆದರೆ ಈ ಕೆಲಸವನ್ನು ಮಾಡಲು ನಾವು ಕೇವಲ ನಮ್ಮ ಮುಬಲ್ಲಿಗರನ್ನು ಮಾತ್ರ ಹೊಂದಿಕೊಂಡಿರಲು ಸಾಧ್ಯವಿಲ್ಲ. ಅವರು ತಬ್ಲೀಗ್ ಮಾಡಲಿ ಮತ್ತು ಅಹ್ಮದಿಯ್ಯತ್ತನ್ನು ಹರಡಲಿ ಎಂದು ಹೇಳಲಾಗದು. ನಾವು ಎಲ್ಲರೂ ಈ ಕೆಲಸದಲ್ಲಿ ಭಾಗವಹಿಸುವವರಾಗಬೇಕು. ನಾವು ನಮ್ಮ ಆಧ್ಯಾತ್ಮಿಕ ಮಟ್ಟವನ್ನು ವರ್ಧಿಸಬೇಕು. ನಾವು ಅಲ್ಲಾಹನೊಂದಿಗೆ ನಮ್ಮ ಸಂಬಂಧವನ್ನು ವರ್ಧಿಸಬೇಕು. ಇವುಗಳೇ ಅಹ್ಮದಿಯ್ಯತ್ತಿನ ವಿರೋಧಿಗಳನ್ನು ಕೊನೆಗೊಳಿಸುವುದು. ಹಾಗೆ ನಾವು ಸಹ ಅಹ್ಮದಿಯ್ಯತ್ತಿನ ಅಭಿವೃದ್ಧಿಯಲ್ಲಿ ಪಾಲುಗಾರರಾಗುವೆವು–

ಇನ್‌ಶಾಅಲ್ಲಾಹ್. ಅಲ್ಲಾಹನು ನಮಗೆ ಹೀಗೆ ಮಾಡುವ ಸ್ಥಾನವನ್ನು ನೀಡುವವನಾಗಲಿ – ಆಮೀನ್.

(ಖುತ್‌ಬ ಜುಮುಅದ ಕೊನೆಗೆ ಹುಝೂರ್ ಹೇಳಿದರು:) ಜುಮುಅ ನಮಾಝ್ ನಂತರ ಒಂದು ನಮಾಝೆ ಜನಾಝ ಗಾಯಿಬ್ ಇದೆ. ಮುಕರ್ರಮ್ ಸೂಫೀ ಝುಫರ್ ಅಹ್ಮದ್ ಸಾಹಿಬ್, ಇಂಡೋನೇಶಿಯದ ಮುಬಲ್ಲಿಗ್. ಇವರು 8–11–2016ರಂದು ನಿಧನ ಹೊಂದಿದರು– ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್.

(ಹುಝೂರ್ ಮೃತರ ಬಗ್ಗೆ ಪ್ರಸ್ತಾಪಿಸಿ ಅವರ ಸದ್ಗುಣಗಳನ್ನು ವಿವರಿಸಿದರು.)

*****

***Friday Sermon delivered by Hadrath Khaleefatul Masih Al Khamis***[(atba)]

*At, Masjid Baithul Futhuh, London on 09-12-2016.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon